ಮುಖಾಂತರ ಮಾಡುವುದಕ್ಕಾಗುವುದಿಲ್ಲ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಎತ್ತಿರತಕ್ಕ ಅಂಶವನ್ನು ನಾವು ಅಮೂಲಾಗ್ರವಾಗಿ ಪರಿಶೀಲನೆ ಮಾಡಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುವುದು ಒಂದು ಮತ್ತು ಈ ಒಂದು ಪಡಿತರ ವ್ಯವಸ್ಥೆಯಲ್ಲಿ ಆಗುತ್ತಾ ಇರತಕ್ಕ ಲೋಪದೋಷಗಳನ್ನು ಸಂಪೂರ್ಣವಾಗಿ ಹತ್ತಿಕ್ಕತಕ್ಕದ್ದು ಮತ್ತು ಜನರಿಗೆ ಕೊಡಲಿಕ್ಕೆ ಇರತಕ್ಕ ಆಹಾರಸಾಮಗ್ರಿಗಳನ್ನು ಸರಿಯಾಗಿ ತಲುಪುವಂತೆ ಮಾಡುವುದಕ್ಕೆ ಸರ್ಕಾರ ಈಗಾಗಲೇ ಒಂದು ಕ್ರಮವನ್ನು ಶುರು ಮಾಡಿದೆ. ತಾವು ಕೊಟ್ಟಿರತಕ್ಕ ಸಲಹೆಯನ್ನು ಸ್ವೀಕಾರ ಮಾಡಿ ಇದರ ಬಗ್ಗೆ ತೆಗೆದುಕೊಂಡ ಕ್ರಮವನ್ನು ಕೆಲವೇ ದಿವಸಗಳಲ್ಲಿ ಸದನದ ಮುಂದೆ ಮಂಡಿಸುವುದಕ್ಕೆ ಕಾರ್ಯಕ್ರಮವನ್ನು ಕೂಡ ಸರ್ಕಾರ ಕೈಗೊಳ್ಳುತ್ತದೆ.

ಶ್ರೀ ಜೆ.ಹೆಚ್ ಪಟೀಲ್ : ತಾವು ಹೇಳಿರುವುದು ಒಂದನ್ನು. ಇನ್ನೂ 9 ಅಂಶ ಕೆಳಗಿದೆ. ನೀರಿನ ಒಳಗೆ ಇದೆ. ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ. ಇದರ ಮೇಲೆ ಸರ್ಕಾರ ಉಗ್ರವಾದ ಕ್ರಮ ತೆಗೆದುಕೊಳ್ಳುತ್ತದೆಂದು ಜನರಲ್ಲಾಗಿ ಹೇಳುವುದಲ್ಲ, ಮಾನ್ಯ ಸದಸ್ಯರಿಗೆ ನಾನು ಬೇಡಿಕೊಳ್ಳುತ್ತೇನೆ. ತಮ್ಮ ತಮ್ಮ ಕ್ಷೇತ್ರದಲ್ಲಿ ಈ ರೀತಿಯಾದ ವ್ಯವಹಾರ ಏನು ನಡೆಯುತ್ತಿದೆ, ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರು ಮತ್ತು ಯಾವ ಪಕ್ಷದವರೇ ಇರಲಿ, ತಮ್ಮ ತಮ್ಮ ಕ್ಷೇತ್ರದಲ್ಲಿ ಈ ಕಾರ್ಡುಗಳ ವ್ಯವಹಾರದೊಳಗೆ ಯಾರ್ಯಾರು ಭಾಗಿಗಳಾಗಿದ್ದಾರೆ, ಅಂತಹವರ ಬಗ್ಗೆ ಮಾಹಿತಿಯನ್ನು ಒದಗಿಸಿದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಅಕ್ಕಿ ತಲುಪುವ ಹಾಗೆಯೇ ಇಲ್ಲ, ಗೋಧಿ ತಲುಪುವ ಹಾಗೆಯೇ ಇಲ್ಲ, ಯಾವುದೂ ತಲುಪುವ ಹಾಗೆಯೇ ಇಲ್ಲ. ಎಲ್ಲವನ್ನೂ ಅಲ್ಲೇ ಇಟ್ಟುಕೊಂಡಿರುತ್ತಾರೆ. ಭಾರಿ ದೊಡ್ಡ ಜಾಲವೇ ಇದೆ. ಈ ಬಗ್ಗೆ ಅಧ್ಯಕ್ಷರಾದ ತಾವು ಕೊಟ್ಟ ಉತ್ತರವನ್ನು ಮೆಚ್ಚಿದ್ದೇನೆ.

ಉಪಾಧ್ಯಕ್ಷರ ಚುನಾವಣೆ

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಶ್ರೀ ಎಂ. ಎಸ್. ಪಾಟೀಲರನ್ನು ಹತ್ತನೆಯ ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೆ, ಶ್ರೀ ತಿಪ್ಪೇಸ್ವಾಮಿಯವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಶ್ರೀ ತಿಪ್ಪೇಸ್ವಾಮಿಯವರು ಸೂಚಿಸಿರುವ ಹಾಗೂ ಶ್ರೀ ಹೆಚ್.ಜಿ. ಗೋವಿಂದೇಗೌಡರು ಅನುಮೋದಿಸಿರುವ ಪ್ರಸ್ತಾವ ಈ ರೀತಿ ಇದೆ.

"ಶ್ರೀ ಎಂ.ಎಸ್. ಪಾಟೀಲ್‌ರವರನ್ನು ಹತ್ತನೆಯ ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸುವುದು"

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ಶ್ರೀ ಎಂ.ಎಸ್. ಪಾಟೀಲ್‌ರವರು ಹತ್ತನೆಯ ವಿಧಾನ ಸಭೆಯ ಉಪಾಧ್ಯಕ್ಷರಾಗಿ ಆಯ್ಕೆಗೊಂಡರು.

+ ಶ್ರೀ ಜೆ.ಹೆಚ್. ಪಟೇಲ್ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಶ್ರೀ ಎಂ.ಎಸ್. ಪಾಟೀಲ್‌ರವರು ಈಗ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಅವರಿಗೆ ಸದನದ ಪರವಾಗಿ, ನಾಯಕರ ಪರವಾಗಿ ಅಭಿನಂದನೆ ಸಲ್ಲಿಸುತ್ತಾ ತಮಗೆ ತಕ್ಕ ಉಪಾಧ್ಯಕ್ಷರಾಗಲಿ. ಸಮಯದಲ್ಲಿ ತಮಷ್ಟೇ ನಿಷ್ಪರೂ ಆದ, ಕಾನೂನು ಪರವಾದ ಮತ್ತು ಪ್ರಜೆಗಳ ಪರವಾದ ನಿಲುವನ್ನು ತೆಗೆದುಕೊಳ್ಳಲಿ, ಅವರಿಗೆ ಯಶಸ್ಸು ದೊರಕಲಿ ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೇ, ತುಂಬಾ ಸಂತೋಷದ ಸಂಗತಿ. ಪ್ರಾಮಾಣಿಕ ವ್ಯಕ್ತಿ ಸನ್ಮಾನ್ಯ ಎಂ.ಎಸ್. ಪಾಟೀಲ್‌ರವರು ಬಿ.ಎ. ಎಲ್.ಎಲ್.ಬಿ. ಪದವೀಧರರಿದ್ದಾರೆ. ಮೂರು ಬಾರಿ ಈ ವಿಧಾನಸಭೆಗೆ ಅವರು ಆಯ್ಕೆಯಾಗಿ ಬಂದಿದ್ದಾರೆ. ಆ ಸ್ಥಾನದಲ್ಲಿ ನಿಮಗೆ ಸಹಾಯಕರಾಗಿ ಒಬ್ಬರು ಕಾನೂನು ಪದವೀಧರರು ಬೇಕಾಗಿತ್ತು. ಅವರು ಈ ಸಮಯದಲ್ಲಿ ನಿಮಗೆ ಸಿಕ್ಕಿದ್ದಾರೆ. ಸನ್ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದಂತೆ ನಿಮಗೆ ಒಳ್ಳೆಯ ಸಹಾಯಕರು ಸಿಕ್ಕಿದ್ದಾರೆ. ನನಗೊಬ್ಬ ರಕ್ಷಕರು ನನಗೆ ಪಕ್ಕದಲ್ಲಿ ಸಿಕ್ಕಿದಂತಾಗಿದೆ. ಏಕೆಂದರೆ, ನಾಣಯ್ಯನವರು ಅಲ್ಲಿ ಎದ್ದು ನನ್ನ ಮೈಮೇಲೆ ಬಿದ್ದಾಗ ನನಗೆ ಅವರು ಸ್ವಲ್ಪ ಗೈಡ್ ಮಾಡಿ, ಹೀಗೆ ನಡೆದುಕೊಳ್ಳಬೇಕು, ಹೀಗೆ ಆಗಬೇಕು ಎಂದು ಪಕ್ಕದಲ್ಲಿ ಕುಳಿತು ಕೆಲವು ಅನುಭವದ ಮೇಲೆ ಗೈಡ್ ಮಾಡಬಹುದು ಎಂದು ಹೇಳಿ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಉಪಾಧ್ಯಕ್ಷರಿಗೆ ನಿಮ್ಮಿಂದ ರಕ್ಷಣೆ ಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ ಸಂಪೂರ್ಣ ರಕ್ಷಣೆ ಕೊಡುವುದು ನಮ್ಮ ಕರ್ತವ್ಯ. ಏಕೆಂದರೆ ಆಡಳಿತ ಪಕ್ಷದವರು ಹೇಗಾದರೂ ಮಾಡಿದಾಗ ನಾವು ಅವರ ರಕ್ಷಣೆಗೆ ಹೋಗಬೇಕಾಗುತ್ತದೆ. ಆದ್ದರಿಂದ ಇಂತಹ ಹಿರಿಯರಿಗೆ ಒಂದು ಸ್ಥಾನ ಸಿಕ್ಕಿರುವಂತಹದ್ದು ನಮಗೆ ಖಂಡಿತಾ ತುಂಬಾ ಆನಂದವಾಗಿದೆ. ಬಹಳ ಯಶಸ್ವಿಯಾಗಿ ಆ ಒಂದು ಸ್ಥಾನವನ್ನು ನಿರ್ವಹಿಸುತ್ತಾರೆನ್ನುವ ವಿಶ್ವಾಸ ನಮಗೆ ಇದೆ. ನಮ್ಮ ಸಂಪೂರ್ಣ ಸಹಕಾರವನ್ನು ಸನ್ಮಾನ್ಯ ಉಪಾಧ್ಯಕ್ಷರಿಗೆ ನಾವು ಕೊಡುತ್ತೇವೆ ಎನ್ನುವ ಭರವಸೆಯನ್ನು ಸಂತೋಷದಿಂದ ಕೊಟ್ಟು ಆ ಸ್ಥಾನಕ್ಕೆ ಆಯ್ಕೆಯಾಗಿರುವುದಕ್ಕೆ ನಾನು ಸ್ವಾಗತವನ್ನು ಮಾಡುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಉಪಾಧ್ಯಕ್ಷರಾಗಿ ಶ್ರೀಮಾನ್ ಎಂ.ಎಸ್. ಪಾಟೀಲ್‌ರವರು ಆಯ್ಕೆಯಾಗಿದ್ದಾರೆ. ಇದು ನಮಗೆಲ್ಲರಿಗೂ ಕೂಡ ಸಂತೋಷವನ್ನು ಉಂಟು ಮಾಡಿದೆ. ರಾಯಚೂರು ಜಿಲ್ಲೆಯಿಂದ ಅವರು ಬಂದಿದ್ದಾರೆ. ಮೂರನೆಯ ಸಲ ಅವರು ಈ ಸದನದ ಸದಸ್ಯರಾಗಿ ಆಯ್ಕೆ ಆಗಿದ್ದಾರೆ. ಕುಷ್ಟಗಿಯಿಂದ ಒಂದು ಸಲ ಸದಸ್ಯರಾಗಿದ್ದರು. ರಾಯಚೂರು ಸಿಟಿಯಿಂದ ಇದು ಎರಡನೆಯ ಸಲ ಅವರು ಬರುತ್ತಿದ್ದಾರೆ. ಹೀಗೆ ಸುಮಾರು 15 ವರ್ಷಗಳಿಂದ ಈ ಸದನದಲ್ಲಿ ಕೆಲಸವನ್ನು ಮಾಡಿಕೊಂಡು ಅಪಾರವಾದ ಅನುಭವವನ್ನು ಪಡೆದುಕೊಂಡಿದ್ದಾರೆ. ಮತ್ತು ವಿಶೇಷವಾಗಿ ಹೇಳಬೇಕೆಂದರೆ ಅವರೂ ಕೂಡ ಈ ಸರ್ಕಸ್‌ನಲ್ಲಿ ಬಿಟ್ಟು ಹೋದಂತಹವರೇ. ಪಕ್ಷದ ಈ ಒಂದು ಸರ್ಕಸ್‌ನಲ್ಲಿ ಸ್ವಲ್ಪ ಮಟ್ಟಿಗೆ ಅವರಿಗೂ ಕೂಡ ಅನ್ಯಾಯ ಆಗಿದ್ದನ್ನು ಸರಿಪಡಿಸಲು ನಮ್ಮ ಹೈದರಾಬಾದ್ - ಕರ್ನಾಟಕಕ್ಕೆ ಒಂದು ಪ್ರಾತಿನಿಧ್ಯ ಇರಲಿ ಎಂದು ಉಪಾಧ್ಯಕ್ಷ ಸ್ಥಾನವನ್ನು ಅವರಿಗೆ ಕೊಟ್ಟಿದ್ದಾರೆ ಎಂದು ನಾವು ಭಾವಿಸಿದ್ದೇನೆ. ಅವರಲ್ಲಿ ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗತಕ್ಕ ಒಂದು ಚಾಕಚಕ್ಯತೆ ಅವರ ಹತ್ತಿರ ಇದೆ. ಒಬ್ಬ ಒಳ್ಳೆಯ ಗೆಳೆಯನಾಗಿ, ಒಬ್ಬ ಒಳ್ಳೆಯ ಅನುಭವಿಯಾಗಿ ಈ ಸದನವನ್ನು ಅವರು ಬಹಳ ಒಳ್ಳೆಯ ರೀತಿಯಿಂದ ಅವರು ನಡೆಸಿಕೊಂಡು ಹೋಗುತ್ತಾರೆ.

ಎನ್ನತಕ್ಕ ವಿಶ್ವಾಸವನ್ನು ಇಟ್ಟು ತಮಗೆ ಒಳ್ಳೆಯ ರೀತಿಯಿಂದ ಸಹಾಯ ಮಾಡುತ್ತೇವೆ. ಈ ಬಗ್ಗೆ ಯಾವ ಸಂಶಯ ಕೂಡ ಬೇಕಾಗಿಲ್ಲ, ಅವರಿಗೆ ಒಳ್ಳೆಯದಾಗಲಿ. ಇನ್ನೂ ಹೆಚ್ಚಿನ ಶಕ್ತಿ ಮತ್ತು ಇನ್ನೂ ಒಳ್ಳೆಯ ಹುದ್ದೆಗಳು ಅವರಿಗೆ ಸಿಗಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್. ಬಂಗಾರಪ್ಪ (ಸೊರಬ ಕ್ಷೇತ್ರ) : ಮಾನ್ಯ ಸಭಾಧ್ಯಕ್ಷರೇ, ಶ್ರೀಮಾನ್ ಪಾಟೀಲರನ್ನು ಮೊಟ್ಟಮೊದಲನೆಯದಾಗಿ ಹಾರೈಸುತ್ತೇನೆ. ಶುಭವನ್ನು ಕೋರುತ್ತೇನೆ. ಸಂಪೂರ್ಣ ಸಹಕಾರವನ್ನು ಈ ಸಂದರ್ಭದಲ್ಲಿ ನಮ್ಮೆಲ್ಲರ ಪರವಾಗಿ ನಾನು ಅವರಿಗೆ ನೀಡುತ್ತಿದ್ದೇನೆ. ತಾವು ಅಧ್ಯಕ್ಷರಾಗಿ ಆಯ್ಕೆ ಆದಂತಹ ಸಂದರ್ಭದಲ್ಲಿ ಯಾವ ಸಹಕಾರ ಒಬ್ಬ ಅಧ್ಯಕ್ಷರಿಗೆ ಬೇಕೋ ಆ ಮಾತುಗಳನ್ನು ಏನು ನಾವು ಆಡಿದ್ದೇವೆ ಅವೇ ಮಾತುಗಳು ಮಾನ್ಯ ಉಪಾಧ್ಯಕ್ಷರಿಗೂ ಕೂಡ ಅನ್ವಯವಾಗುತ್ತದೆ. ಆ ಸ್ಥಾನದಲ್ಲಿ ಕುಳಿತಿರತಕ್ಕ ಸಂದರ್ಭದಲ್ಲಿ ಅವರು ಕರ್ತವ್ಯ ಮಾಡತಕ್ಕ ಜವಾಬ್ದಾರಿ ಬಹಳ ದೊಡ್ಡದು ಇದೆ. ಉಪಾಧ್ಯಕ್ಷರಾದರೂ ಕೂಡ ಕುಳಿತಾಗ ಅಧ್ಯಕ್ಷರಾಗಿಯೇ ಕೆಲಸ ಮಾಡತಕ್ಕದ್ದು, ನಿಯಮಗಳ ಪ್ರಕಾರ ಹೋಗತಕ್ಕ ವಿಚಾರ ಅದರಲ್ಲಿ ಅಡಗಿದೆ. ಅವರೂ ಕೂಡ ವೃತ್ತಿಯಲ್ಲಿ ವಕೀಲರು ಕಾರ್ಯಕಲಾಪಗಳ ನಿಯಂತ್ರಣ, ನಡವಳಿಕೆಗಳ ಅನುಕರಣೆ, ಇತ್ಯಾದಿ ವಿಚಾರಗಳ ಬಗ್ಗೆ ಕಲಿಯತಕ್ಕದ್ದು ಅವರಿಗೂ ಬಹಳ ಇರುತ್ತದೆ. ಈ ಸಂದರ್ಭದಲ್ಲಿ ಹಲವಾರು ಕಡೆಯಿಂದ ಅವರಿಗೆ ಸಲಹೆ ಸಹಕಾರಗಳು ಬೇಕಾಗುತ್ತದೆ. ಆ ಬಗ್ಗೆ ಪಾಟೀಲರು ಏನೂ ಅನುಮಾನಪಡಬೇಕಾಗಿಲ್ಲ, ನಿಯಮಾವಳಿಯ ಚೌಕಟ್ಟಿನಲ್ಲಿ ಸಂಪೂರ್ಣ ಸಹಕಾರವನ್ನು ನಾವು ಸದನದಲ್ಲಿ ಕೊಡುತ್ತೇವೆ. ತಾವು ಯಾವುದೇ ಒಂದು ಆತಂಕವಿಲ್ಲದೇ ತಮ್ಮ ಕರ್ತವ್ಯವನ್ನು ತಾವು ನಿರ್ವಹಣೆ ಮಾಡಬಹುದು. ಈ ಸದನ ಜನರಿಗೆ ಇದೆ ಎನ್ನತಕ್ಕ ಸಂಪೂರ್ಣ ಅರಿವು ಮತ್ತು ಜವಾಬ್ದಾರಿ ನಮಗೆಲ್ಲರಿಗೂ ಇದೆ. ತಮ್ಮ ಅನುಭವದಲ್ಲೂ ಕೂಡ ಇದು ಇರತಕ್ಕ ಮಾತು. ಆದ್ದರಿಂದ ಸಂಪೂರ್ಣ ಸಹಕಾರದ ಹಿನ್ನೆಲೆಯಲ್ಲಿ ತಾವು ಕರ್ತವ್ಯವನ್ನು ನಿರ್ಭೀತಿಯಿಂದ ಅಡ್ಡಿ ಆತಂಕಗಳು ಇಲ್ಲದೇ ನಡೆಸಿಕೊಂಡು ಹೋಗಬಹುದು. ಇನ್ನು ಮಾರ್ಗದರ್ಶಕರಾಗಿ ಮಾನ್ಯ ರಮೇಶ್ ಕುಮಾರ್ ಅವರು ಅಧ್ಯಕ್ಷರಾಗಿ ಅಲ್ಲಿ ಇದ್ದೇ ಇದ್ದಾರೆ. ನಾನು ಇಷ್ಟು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಿ ತಮಗೆ ಮತ್ತೊಮ್ಮೆ ಶುಭವನ್ನು ಕೋರಿ ಸಂಪೂರ್ಣ ಸಹಕಾರವನ್ನು ತಮಗೆ ಈ ಸಂದರ್ಭದಲ್ಲಿ ನೀಡಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಎಂ.ಎಸ್. ಪಾಟೀಲರನ್ನು ವಿಧಾನ ಸಭೆಯ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆ ಮಾಡಿರುವುದನ್ನು ನಾನು ಅತ್ಯಂತ ಪ್ರೀತಿ ಮತ್ತು ವಿಶ್ವಾಸದಿಂದ ಸ್ವಾಗತಿಸುತ್ತೇನೆ. ಶ್ರೀಮಾನ್ ಎಂ.ಎಸ್. ಪಾಟೀಲರು ಸಚಿವ ಸಂಪುಟಕ್ಕೆ ಹೋಗುತ್ತಾರೆಂದು ನಾವೆಲ್ಲರೂ ಅಂದುಕೊಂಡಿದ್ದೆವು. ಆದರೆ, ಅವರ ಪರಿಸ್ಥಿತಿ ಹೀಗೇಕಾಯಿತೋ ನನಗೆ ಗೊತ್ತಿಲ್ಲ. ಉಪಾಧ್ಯಕ್ಷರ ಸ್ಥಾನವನ್ನು ವಿರೋಧಪಕ್ಷದವರಿಗೆ ಕೊಡತಕ್ಕಂತಾದ್ದು ಲೋಕಸಭೆಯಲ್ಲಿ ಸಂಪ್ರದಾಯ. ಆದರೆ, ನಾವು ಯಾರೂ ಕೂಡ ಇಲ್ಲಿ ಉಪಾಧ್ಯಕ್ಷರಾಗಿ ಆಗಬೇಕೆಂದು ಅರ್ಜಿಯನ್ನು ಹಾಕಲಿಲ್ಲ, ಅಥವಾ ನಾವು ಯಾರೂ ಕೇಳಲಿಲ್ಲ, ಅವರು ಸೌಜನ್ಯಕ್ಕಾದರೂ ಉಪಾಧ್ಯಕ್ಷರ ಸ್ಥಾನವನ್ನು ನಿಮಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ ಎಂದು ಕೇಳತಕ್ಕಂಥ ಸೌಜನ್ಯ ತಮಗೆ ಬರಲಿಲ್ಲ, ಅವರು ಕೇಳುತ್ತಾರೆಂದು ನಾವು ಯೋಚನೆ ಮಾಡಿದ್ದೆವು. ನಿಮಗೆ ಒಳ್ಳೆಯ ಬುದ್ಧಿ ಕೊಟ್ಟಿದ್ದಾನೆ ಎಂದು ನಾವು ಯಾರೂ ಕೇಳಲಿಲ್ಲ, ಆದರೆ, ಆ ಸ್ಥಾನಕ್ಕೆ ಬಂದಿರತಕ್ಕ ಒಳ್ಳೆಯ ಆದರ್ಶವಾದ ವ್ಯಕ್ತಿ ಶ್ರೀಮಾನ್ ಎಂ.ಎಸ್. ಪಾಟೀಲರನ್ನು ನಾನು ಮೆಚ್ಚುತ್ತೇನೆ. ಅವರಿಗೆ ಯಾವಾಗಲೂ ಒಳ್ಳೆಯ ರೀತಿಯ ಸಹಕಾರವನ್ನು ಕೊಡುತ್ತೇನೆ. ಮಾನ್ಯ ಅಧ್ಯಕ್ಷರು, ಅಧ್ಯಕ್ಷರಾಗಿ ಚುನಾಯಿತರಾದ

ಮೇಲೆ, ಈ ಸದನವನ್ನು ನಡೆಸುತ್ತಿರತಕ್ಕಂಥ ರೀತಿನೀತಿಗಳನ್ನು ನೋಡಿದಾಗ, ಬಹಳ ಮೆಚ್ಚಬೇಕೆಂದು ನಾವೆಲ್ಲರೂ ಅಂದುಕೊಂಡಿದ್ದೇವೆ. ಇವತ್ತಿನ ವಾದವಿವಾದದಲ್ಲಿ ನಿಂತು ಮಾತನಾಡಿದ್ದನ್ನು ನೋಡಿದಾಗ, ತಾವು ಮೂರು ದಿವಸದಲ್ಲಿ ಬೆಳಕನ್ನು ಚೆಲ್ಲುತಕ್ಕ ಕೆಲಸವನ್ನು ಮಾಡಿದ್ದೀರಿ. ಅಷ್ಟೇ ಸಮರ್ಥವಾಗಿ ಶ್ರೀಮಾನ್ ಎಂ.ಎಸ್. ಪಾಟೀಲರೂ ಮಾಡುತ್ತಾರೆ ಎನ್ನತಕ್ಕಂತಾದ್ದು. ಆದರೆ ಒಂದು ಭಯ, ಮಾನ್ಯ ಯಡಿಯೂರಪ್ಪನವರು ಅಲ್ಲಿ ಕುಳಿತಿರತಕ್ಕಂತಾದ್ದು ಭಯ. ಅವರು ಯಾವ ಘಳಿಗೆಯಲ್ಲಿ ಎದ್ದು, ಎಂ.ಎಸ್.ಪಾಟೀಲರ ಕಡೆ ಕೈ ತಿರುಗಿಸಿದರೆ, ಅವರ ಕನ್ನಡದ ಗತಿ ಏನು ಎಂದು. ನನಗೆ ಬೇರೆ ಯಾವುದೂ ಭಯ ಇಲ್ಲ. ಆದರೆ, ಯಡಿಯೂರಪ್ಪನವರು ಈ ಕೆಲಸ ಮಾಡುವುದಿಲ್ಲರೆಂದು ನಗುತ್ತಾ ಹೇಳುತ್ತಿದ್ದಾರೆ, ಆ ನಂಬಿಕೆಯೂ ನನಗಿದೆ. ಮಾನ್ಯ ಪಾಟೀಲರಿಗೆ ಎಲ್ಲಾ ರೀತಿಯ ಬೆಂಬಲ, ಸಹಕಾರವನ್ನು ಕೊಡುತ್ತೇವೆ. ಮಾನ್ಯ ಪಾಟೀಲರೂ ಕೂಡ ಯಾವಾಗಲೂ ನಮ್ಮ ಪರ ಇರಬೇಕು ಮತ್ತು ನಮ್ಮ ಪರ ಅವರಿದ್ದಾರೆ ಎಂದು ಅಂದುಕೊಂಡಿದ್ದೇವೆ. ಅವರಿಗೆ ಒಳ್ಳೆಯದಾಗಲಿ ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ಶ್ರೀ ಎಂ.ಎಸ್. ಪಾಟೀಲರು ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವುದಕ್ಕೆ, ಅವರಿಗೆ ಧನ್ಯವಾದಗಳನ್ನರ್ಪಿಸುತ್ತಿದ್ದೇನೆ. ಇದೇ ಸಂದರ್ಭದಲ್ಲಿ ನನ್ನ ಮನವಿ ಏನೆಂದರೆ, ಈ ಸದನವನ್ನು, ಈ ಸಭೆಯನ್ನು ವ್ಯವಸ್ಥಿತವಾಗಿ ಮತ್ತು ಶಿಸ್ತುಬದ್ಧವಾಗಿ ನಡೆಸಿಕೊಂಡು ಹೋಗುವುದಕ್ಕೆ ಉಪಾಧ್ಯಕ್ಷರು ಮತ್ತು ಸಭಾಧ್ಯಕ್ಷರು ಪ್ರಯತ್ನ ಮಾಡಬೇಕು. ನಾವು ಈಗ್ಗೆ ಎರಡು ದಿವಸಗಳಿಂದ ಗಮನಿಸತಕ್ಕಂಥ ಅಂಶ ಏನೆಂದರೆ, ಒಬ್ಬ ಸದಸ್ಯರು ಎದ್ದು, ತಮ್ಮ ಅಭಿಪ್ರಾಯವನ್ನು ಮಾಡುವಾಗ, ಇನ್ನೊಬ್ಬ ಸದಸ್ಯರು ಮಧ್ಯೆ ಪ್ರವೇಶ ಮಾಡಿ ತೊಂದರೆ ಮಾಡುವುದನ್ನು ತಡೆಯಬೇಕೆಂದು ನನ್ನ ಮನವಿ. ಅದೇ ರೀತಿಯಲ್ಲಿ ಈ ಸದನವನ್ನು ಗಂಭೀರವಾಗಿ ಮತ್ತು ಘನತೆಯಿಂದ ನಡೆಸಿಕೊಂಡು ಹೋಗತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಮಾನ್ಯ ಎಂ.ಎಸ್. ಪಾಟೀಲರು ಮತ್ತು ಸನ್ಮಾನ್ಯ ರಮೇಶ್‌ಕುಮಾರ್‌ರವರು ಮಾಡಬೇಕೆಂದು ನನ್ನ ಮನವಿ. ಮತ್ತೆ ಉಪಾಧ್ಯಕ್ಷರ ಸ್ಥಾನವನ್ನು ಬಹುಶಃ ಯಾರಾದರೂ ಹಿರಿಯ ಪಕ್ಷೇತರ ಅಭ್ಯರ್ಥಿಗೆ ಕೊಟ್ಟಿದ್ದರೆ ಸೂಕ್ತವಾಗಿತ್ತು. ಇದರಿಂದ ನಿಮಗೂ ಅನುಕೂಲವಾಗುತ್ತಿತ್ತು ಎಂದು ನನ್ನ ಅಭಿಪ್ರಾಯ. ಇಷ್ಟು ಹೇಳಿ, ಮಾನ್ಯ ಉಪಾಧ್ಯಕ್ಷರಿಗೆ ಧನ್ಯವಾದಗಳನ್ನು ಹೇಳುವುದರ ಜೊತೆಗೆ ಅವರಿಗೆ ಎಲ್ಲಾ ರೀತಿಯ ಸಹಕಾರ ಕೊಡುತ್ತೇವೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಮುನಿಯಪ್ಪ (ಗಾಂಧಿನಗರ) : ಸಭಾಧ್ಯಕ್ಷರೇ, ಉಪಾಧ್ಯಕ್ಷರ ಆಯ್ಕೆಯನ್ನು ಸರ್ವಾನುಮತದಿಂದ, ಈ ಸದನ ಆಯ್ಕೆ ಮಾಡಿದೆ. ಇದು ಬಹಳ ಸಂತೋಷದ ವಿಚಾರ. ಕಳೆದ ಮೂರು ದಿವಸಗಳಿಂದ ನಾನು ಭಾಗವಹಿಸಲು ಸಾಧ್ಯವಾದಂಥ ಈ ಸದನದಲ್ಲಿ, 120 ಕ್ಕೂ ಹೆಚ್ಚು ಸದಸ್ಯರುಗಳು ಹೊಸದಾಗಿ ಆಯ್ಕೆಯಾಗಿ ಪ್ರಥಮ ಬಾರಿಗೆ ಈ ಶಾಸನ ಸಭೆಯನ್ನು ಪ್ರವೇಶ ಮಾಡಿದ್ದಾರೆ. ಹೊಸದಾಗಿ ಬಂದಂಥವರು ಬಹಳ ಉತ್ಸಾಹದಿಂದ ಅವರವರ ಕ್ಷೇತ್ರಗಳ ವಿಚಾರಗಳನ್ನು ಮತ್ತು ರಾಜ್ಯದ ಉದ್ದಗಲಕ್ಕೂ ಇರತಕ್ಕ ಸಮಸ್ಯೆಗಳನ್ನು ಪ್ರಸ್ತಾಪ ಮಾಡಬೇಕೆಂಬ ಹುಮ್ಮಸ್ಸಿನಿಂದ ಬಂದಂಥವರಿಗೆ ಒಳ್ಳೆಯ ಉತ್ತೇಜನ ನೀಡುವ ರೀತಿಯಲ್ಲಿ ಕಲಾಪಗಳಲ್ಲಿ ಭಾಗವಹಿಸುವಂತ ಸಂದರ್ಭ. ಇವತ್ತು ಉಪಾಧ್ಯಕ್ಷರನ್ನು ಸರ್ವಾನುಮತದಿಂದ ಈ ಸದನಕ್ಕೆ ಆಯ್ಕೆ ಮಾಡಿದೆ. ಅವರು ಸಮಾಜವಾದಿ ಸಂಘಟನೆಯಿಂದ, ಸಮಾಜವಾದಿ ಬಂಧುವಾಗಿ, ಮೂರನೇಬಾರಿ ಶಾಸನ ಸಭೆಯನ್ನು ಪ್ರವೇಶ ಮಾಡಿದ್ದಾರೆ. ಅವರಿಗೆ ಒಳ್ಳೆಯದಾಗಲಿ ಮತ್ತು ಅವರಿಗೆ ಆರೋಗ್ಯ ಭಾಗ್ಯ ದೊರೆತು, ಹೆಚ್ಚು ಯಶಸ್ವಿಯಾಗಿ ಕೆಲಸಕಾರ್ಯವನ್ನು ನಿರ್ವಹಿಸತಕ್ಕ ರೀತಿಯಲ್ಲಿ ಇರಲಿ ಎಂದು ಹೇಳುತ್ತೇನೆ. ಮತ್ತು ತಾವು ಕೂಡ

ಅಧ್ಯಕ್ಷರಾಗಿ ಆಯ್ಕೆಯಾದ ಸಂದರ್ಭದಲ್ಲಿ, ತಮಗೆ ಶುಭಾಶಯಗಳನ್ನು ಸಲ್ಲಿಸಲು ನಾನು ಸದನದಲ್ಲಿ ಇರಲಿಲ್ಲ. ಆದಕಾರಣ, ತಾವೂ ಕೂಡ ಒಳ್ಳೆಯ ರೀತಿಯಲ್ಲಿ, ಎರಡು ಕಡೆಗಳಲ್ಲೂ ಸಮವಾಗಿ, ಸಮಸ್ಯೆಗಳನ್ನು, ಸಮಸ್ಯೆಗಳ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, ಎಡಭಾಗ, ಬಲಭಾಗ ಮತ್ತು ಮುಂಭಾಗದಲ್ಲಿರತಕ್ಕ ಸದಸ್ಯರ ಗಮನವನ್ನು ಸೆಳೆಯುವ ರೀತಿಯಲ್ಲಿ ಕೆಲಸ ಮಾಡಿದ್ದೀರಿ. ತಮಗೂ ಧನ್ಯವಾದಗಳನ್ನು ಅರ್ಪಿಸಿ, ತಾವು ಹೆಚ್ಚು ರೀತಿಯಲ್ಲಿ ಕೆಲಸ ಮಾಡಿ, ರಾಜ್ಯದ ಹಿತಚಿಂತನೆ ಮಾಡಿ, ಇಲ್ಲಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಡುತ್ತೀರಿ ಎನ್ನುವ ನಂಬಿಕೆಯಿಂದ, ಧನ್ಯವಾದಗಳನ್ನು ಅರ್ಪಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ಎನ್. ಶಿವನಂಜಪ್ಪ (ಗುಬ್ಬಿ) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಎಂ.ಎಸ್. ಪಾಟೀಲರು ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಚುನಾಯಿತರಾಗಿರುವುದು ನಿಜವಾಗಿಯೂ ಸಂತೋಷ ತರತಕ್ಕಂತಾದ್ದು; ನಾನು ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಮತ್ತೆ ಪಕ್ಕದಲ್ಲಿರತಕ್ಕ ಮಾನ್ಯ ಯಡಿಯೂರಪ್ಪನವರನ್ನು, ಸ್ವಲ್ಪ ಹಾಗೆಯೇ ಸಮಾಧಾನಪಡಿಸಿಕೊಂಡು ಇರಬೇಕಾಗುತ್ತದೆಂಬ ಮಾತನ್ನೂ ಹೇಳುತ್ತೇನೆ. ಏಕೆಂದರೆ, ಅವರು ಬಹಳ ಸೌಮ್ಯ. ನಮ್ಮ ಉಪಾಧ್ಯಕ್ಷರು ತುಂಬಾ ಸೌಮ್ಯ, ನಾನು ಬಹಳ ದಿನಗಳಿಂದ ನೋಡುತ್ತಿದ್ದೇನೆ. ಅವರು ಕುರ್ಚಿಯ ಮೇಲೆ ಹೋದರೆ, ಸ್ವಲ್ಪ ಧೈರ್ಯ ತಾಳಿ, ಮಾನ್ಯ ವಾಟಾಳ್ ನಾಗರಾಜ್ ಮತ್ತು ಮಾನ್ಯ ಯಡಿಯೂರಪ್ಪನವರು, ನಾವು ಮಾತನಾಡುವಾಗ ಮತ್ತು ಬೇರೆಯವರು ಮಾತನಾಡುವಾಗ ಎದ್ದು, ಗಲಾಟೆ ಮಾಡದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಹೇಳಿ, ಅವರಿಗೆ ಶುಭವನ್ನು ಹಾರೈಸುತ್ತಿದ್ದೇನೆ. ಧನ್ಯವಾದಗಳು.

ಶ್ರೀ ಬಿ.ಆರ್. ಯಾವಗಲ್ (ನರಗುಂದ) : ಮಾನ್ಯ ಅಧ್ಯಕ್ಷರೇ, ಮಾನ್ಯಶ್ರೀ ಎಂ.ಎಸ್. ಪಾಟೀಲರು, ನೂತನವಾಗಿ, ಅವಿರೋಧವಾಗಿ ಉಪಾಧ್ಯಕ್ಷರಾಗಿ ಆಯ್ಕೆಯಾದುದಕ್ಕಾಗಿ, ಈ ಸಂದರ್ಭದಲ್ಲಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಮೊನ್ನೆ ತಾವು ಅಧ್ಯಕ್ಷರಾಗಿ ಆಯ್ಕೆಯಾದ ಸಂದರ್ಭದಲ್ಲಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಒಂದೆರಡು ಮಾತನ್ನು ಈ ಉಪಾಧ್ಯಕ್ಷರ ಪದವಿ ಮತ್ತು ಆ ಸ್ಥಾನದ ಬಗ್ಗೆ ಹೇಳುತ್ತೇನೆ. ಇದನ್ನು ತಾವು ಗಮನಿಸಿದರೋ ಇಲ್ಲವೋ ಎಂದು ಮತ್ತೊಮ್ಮೆ ಒತ್ತಾಯ ಮಾಡುವುದಕ್ಕೆ ನಿಂತಿದ್ದೇನೆ. ನಾನೂ ಕೂಡ ಆ ಸ್ಥಾನದಲ್ಲಿ ಇದ್ದೆ. ಆಗ ತಾವು ಇಲ್ಲಿ ಇದ್ದೀರಿ. ತಾವು ನನ್ನ ಬಗ್ಗೆ ಬಹಳಷ್ಟು ಹಾಸ್ಯವನ್ನೂ ಮಾಡಿದ್ದೀರಿ. ಇವೆಲ್ಲವೂ ತಮಗೆ ನೆನಪಿದೆ ಎಂದು ಭಾವಿಸುತ್ತೇನೆ. ಉಪಾಧ್ಯಕ್ಷರ ಸ್ಥಾನ ಕಾನೂನು, ನಿಯಮಗಳ ಚೌಕಟ್ಟಿನಲ್ಲಿ, ಅದರದೇ ಆದಂಥ ಪಾತ್ರ ಪ್ರತ್ಯೇಕವಾಗಿದೆ ಎಂದು ನಾನು ಭಾವಿಸುವುದಿಲ್ಲ. ತಮಗೆ ಪೂರಕವಾಗಿಯೇ ಇದೆ. ತಾವು ಮತ್ತು ಸದನ ಅವಕಾಶ ನೀಡಿದರೆ, ಆ ಸ್ಥಾನಕ್ಕೆ ಹೆಚ್ಚಿನ ಪಾತ್ರ ಕೊಡುವುದಕ್ಕೆ ಸಾಧ್ಯವಿದೆ. ತಮಗೆ ಹೇಳಬೇಕಾದುದೇನೂ ಇಲ್ಲ, ಈ ರೀತಿಯಾಗಿ, ಪೂರಕವಾಗಿ, ಮತ್ತು ಯಾರು ಆ ಸ್ಥಾನದಲ್ಲಿ ಕುಳಿತುಕೊಳ್ಳುತ್ತಾರೆ. ಆ ಸ್ಥಾನದಲ್ಲಿ ಕುಳಿತಾಗ, ಅಧ್ಯಕ್ಷರ ಕೃಪಾಕಟಾಕ್ಷಕ್ಕೆ ಒಳಗಾಗಿ ಆ ಪಾತ್ರವನ್ನು ಆಡುವಂಥ ಸಂದರ್ಭ ಬರಬಾರದು ಎಂದು ಮತ್ತೊಮ್ಮೆ ನಿವೇದನೆ ಮಾಡುತ್ತಾ, ಅವರಿಗೆ ತಮ್ಮ ಮೂಲಕ ಅಭಿನಂದನೆ ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಪಾಟೀಲರು ಉಪಾಧ್ಯಕ್ಷರಾಗಿ ಆರಿಸಿ ಬಂದುದಕ್ಕಾಗಿ,ಅವರನ್ನು ತುಂಬು ಹೃದಯದಿಂದ ಅಭಿನಂದಿಸುತ್ತೇನೆ. ಆದರೆ, ಒಂದು ನೋವಿನ ಪ್ರಸಂಗ. ಕಾರ್ಯಾಂಗದವರು ಶಾಸಕಾಂಗ ತಮ್ಮ ನಬಾರ್ಡಿನೇಟ್ ಆರ್ಗನೈಸೇಷನ್ ಎಂದು ತಿಳಿದುಕೊಳ್ಳತಕ್ಕ ಸ್ವಭಾವ ಇತ್ತೀಚಿನ ದಿನಗಳಲ್ಲಿ ಬರುತ್ತಿದೆ. ಅವತ್ತು ತಮಗೆ ಅಭಿನಂದನೆ ಹೇಳತಕ್ಕಂಥ ಕಾಲದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಸದಸ್ಯರಲ್ಲಿ ಇದು ಬರಬಾರದು. ಅವತ್ತು ತಮಗೆ ಅಭಿನಂದನೆ ಸಲ್ಲಿಸಿ

ಮಾತನಾಡತಕ್ಕ ಕಾಲದಲ್ಲಿ, ನಮ್ಮ ಮಾನ್ಯ ಖರ್ಗೆಯವರು ಹೇಳಿದರು. ನಿಮಗೆ ಒಳ್ಳೆಯ ಸ್ಥಾನ ಸಿಗಬೇಕಾಗಿತ್ತು, ಸಿಗಲಿಲ್ಲ ಎಂದು. ಇವತ್ತು ವಾಟಾಳ್ ನಾಗರಾಜ್‌ರವರು ಹೇಳುತ್ತಾರೆ. ಮಂತ್ರಿಯಾಗಿರಬೇಕಾಗಿತ್ತು, ಉಪಾಧ್ಯಕ್ಷರಾದಿರಿ ಎಂದು. ಮಾನ್ಯ ಅಧ್ಯಕ್ಷರೇ, ನಾನು ಹೇಳುತ್ತೇನೆ. ತುಂಬಾ ನೊಂದ ಮನಸ್ಸಿನಿಂದ ಹೇಳುತ್ತೇನೆ. ಇದು ತಪ್ಪು; ಅಸ್ಪರ್ಷನೀಯ ವಿಚಾರ.ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ನಮ್ಮ ವ್ಯವಸ್ಥೆಯಲ್ಲಿ ಈಗ 224 ಜನ ಸದಸ್ಯರು ಅಲಂಕರಿಸಬಹುದಾದ ಗೌರವಾನ್ವಿತ, ಅತಿ ದೊಡ್ಡ ಸ್ಥಾನ ಎಂದರೆ ಅಧ್ಯಕ್ಷರು, ಅದು ಬಿಟ್ಟರೆ ಉಪಾಧ್ಯಕ್ಷರು.

ಎಂ.ಎಸ್. ಪಾಟೀಲರಿಗೆ ಇದಕ್ಕಿಂತ ದೊಡ್ಡ ಸ್ಥಾನ ಬೇಕು ಅಂದರೆ ಮುಖ್ಯಮಂತ್ರಿ ಅಲ್ಲ, ಇದಕ್ಕಿಂತ ದೊಡ್ಡ ಸ್ಥಾನ ಅಂದರೆ ಅಧ್ಯಕ್ಷಗಿರಿ. ಇದನ್ನು ನಾವು ಅರಿತುಕೊಳ್ಳಬೇಕು. ನಮ್ಮ ವ್ಯವಸ್ಥೆಯಲ್ಲಿ Legislature is the supreme authority. The person presiding over the meeting of Legislature is the highest man, respected man. Except that he cannot pass order for transfer or sanction some works...

ನಮ್ಮ ದೃಷ್ಟಿಕೋನ ಸದಸ್ಯರಲ್ಲಿ ಬದಲಾಗಬೇಕೆಂದು ನಾನು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡಿಕೊಂಡು ಇವತ್ತು ಎಂ.ಎಸ್. ಪಾಟೀಲರು ಯಾರೋ ಹಾಗೆ ಹೇಳುತ್ತಾರೆ ಎಂದು ನೀವು ಹಾಗೆ ತಿಳಿದುಕೊಳ್ಳಬೇಡಿ, ಮಂತ್ರಿ ಸ್ಥಾನಕ್ಕಿಂತ ಹೆಚ್ಚಿನ ನಿಮ್ಮ ಸ್ಥಾನ ದೊಡ್ಡದು ಎಂದು ನಾನು ಹೇಳುತ್ತೇನೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನದ ಮುಂದೆ ಮಂತ್ರಿ ಕೆಲಸ ತೃಣ. ಈ ಮಂತ್ರಿಗಳ ಕೆಲಸ ತೃಣ ಎನ್ನುವುದನ್ನು ತಾವು ಅರ್ಥ ಮಾಡಿಕೊಂಡು ಸಭೆಯನ್ನು ನಡೆಸಿಕೊಂಡು ಹೋಗಿ ಎಂದು ಹೇಳಿ ನಾನು ಮತ್ತೊಮ್ಮೆ ಅವರಿಗೆ ತುಂಬು ಹೃದಯದಿಂದ ಅಭಿನಂದಿಸಿ ನಿಮಗೂ ನಮಸ್ಕರಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸೈಯದ್ ಜುಲ್ಫೀಕರ್ ಹಶ್‌ಮೀ (ಬೀದರ್) : (ಮಾನ್ಯ ಸದಸ್ಯರು ಉರ್ದುವಿನಲ್ಲಿ ಮಾತನಾಡಿದ್ದರಿಂದ ರೆಕಾರ್ಡ್ ಮಾಡಲಾಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಛೇ..ಛೇ.. ಏನಿದು ನಾನು ಹೇಳಿದೆ. ತಪ್ಪಾದರೂ ಚಿಂತೆ ಇಲ್ಲ, ಕನ್ನಡದಲ್ಲಿ ಮಾತನಾಡಿ ಎಂದು ಹೇಳಿದ್ದೇನೆ. ತಿರುಗಿದಾರಿತಪ್ಪಿತಲ್ಲ; ಇದು ಹೇಗೆ ಇದು. ಅವರು ತುಂಬಾ ಒಳ್ಳೆಯವರು. ಅವರ ಬಗ್ಗೆ ಗೌರವ ಇದೆ.

ಶ್ರೀ ಸೈಯದ್ ಜುಲ್ಫಿಕರ್ ಹಶ್‌ಮೀ (ಮಾನ್ಯ ಸದಸ್ಯರು ಉರ್ದುವಿನಲ್ಲಿ ಮಾತನಾಡಿದರು)

ಶ್ರೀ ವಾಟಾಳ್ ನಾಗರಾಜ್ : ಈ ಭಾಷೆ ಕಡತದಲ್ಲಿ ಹೋಗುತ್ತಾ? ತಾವು ಹೇಳಿ ಭಾಷೆ ಬಗ್ಗೆ ನನ್ನದೇನೂ ವಿರೋಧ ಇಲ್ಲ, ಯಾವುದೇ ಭಾಷೆಯ ಬಗ್ಗೆ ವಿರೋಧ ಇಲ್ಲ, ಬರೀ ಇತರ ಭಾಷೆಯವರೇ ಇವರಿಗೆ ಓಟು ಕೊಟ್ಟಿಲ್ಲ, ಕನ್ನಡದ ಜನ ಇವರಿಗೆ ಓಟು ಕೊಟ್ಟಿದ್ದಾರೆ.

ಅಧ್ಯಕ್ಷರು : ತಾವು ಉರ್ದುವಿನಲ್ಲಿ ಮಾತನಾಡುವುದಕ್ಕೆ ನಾವೇನೂ ಆಕ್ಷೇಪಣೆ ಎತ್ತುವುದಿಲ್ಲ. ನಮ್ಮ ಕಾರ್ಯಾಂಗದಲ್ಲಿ ತಾವು ಹೇಳಿದಂತಹ ಭಾವನೆಗಳು ರೆಕಾರ್ಡ್‌ಗೆ ಹೋಗುವುದಕ್ಕೆ ವ್ಯವಸ್ಥೆ ಇಲ್ಲ, ಇದುವರೆಗೂ ಅಂತಹ ಒಂದು ಸನ್ನಿವೇಶ ನಮಗೆ ಒದಗಿ ಬಂದಿರಲಿಲ್ಲ. ತಮ್ಮ ಮಾತುಗಳು ದಾಖಲೆಯಲ್ಲಿರಬೇಕಾದರೆ ತಮಗೆ ಸ್ವಲ್ಪ ತೊಂದರೆ ಆದರೂ ಚಿಂತೆ ಇಲ್ಲ, ತಾವು ಏನು ಹೇಳುತ್ತೀರೋ ಅದನ್ನು ಕನ್ನಡದಲ್ಲಿ ಹೇಳಿ. ನಮ್ಮ ಕಾರ್ಯಾಂಗದವರು ಅದನ್ನು ಸರಿಯಾದ ರೀತಿಯಲ್ಲಿ ದಾಖಲು ಮಾಡಿಕೊಳ್ಳುತ್ತಾರೆ. ತಮಗೆ ಕನ್ನಡದಲ್ಲಿ ಮಾತನಾಡಲು ಕಷ್ಟವಾದರೆ ಇಂಗ್ಲೀಷಿನಲ್ಲಿ

ಮಾತನಾಡಿ. ತಾವು ಒಬ್ಬ ಸದಸ್ಯರಾಗಿ ವ್ಯಕ್ತ ಮಾಡಿದಂತಹ ಭಾವನೆಗಳು ದಾಖಲೆಗೆ ಹೋಗದೆ ಇದ್ದರೆ ಅದು ಬಹಳ ಮುಜಗರವಾಗುತ್ತದೆ. ದಯವಿಟ್ಟು ಸಹಕರಿಸಿ.

ಶ್ರೀ ಸೈಯದ್ ಜುಲ್ಫೀಕರ್ ಹಶ್‌ಮಿ : ಮಾನ್ಯ ಅಧ್ಯಕ್ಷರೇ, ನಮ್ಮ ಎಂ.ಎಸ್. ಪಾಟೀಲರು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಅವರಿಗೆ ನಮ್ಮ ಶುಭಾಶಯಗಳು. ಅವರು ನಮ್ಮ ಹೈದ್ರಾಬಾದ್ ಕರ್ನಾಟಕ ಭಾಗದಿಂದ ಬಂದಿದ್ದಾರೆ. ಮತ್ತು ಶ್ರೀ ಎಂ.ಎಸ್. ಪಾಟೀಲರು ನಮ್ಮ ಹೈದ್ರಾಬಾದ್ ಕರ್ನಾಟಕ ಭಾಗದ ಯುವಕ ಸಂಘರ್ಷ ಸಮಿತಿಯ ಅಧ್ಯಕ್ಷರೂ ಸಹ ಆಗಿದ್ದಾರೆ. ಅವರ ಕಡೆಯಿಂದ ನಮ್ಮ ಹೈದ್ರಾಬಾದ್ ಕರ್ನಾಟಕ ಜನತೆಯ ಮತ್ತು ನಮ್ಮ ವಿಶ್ವಾಸ ಅವರ ಮೇಲೆ ಇದೆ. ಹೈದ್ರಾಬಾದ್ ಕರ್ನಾಟಕ ಮತ್ತು ಬಿಜಾಪುರ ಜಿಲ್ಲೆಯ ಅಭಿವೃದ್ಧಿ ಕೆಲಸಗಳು ಏನು ಇರುತ್ತವೆ ಆ ಕೆಲಸಗಳನ್ನು ಅವರು ಮಾಡಿಕೊಡಬೇಕೆಂದು ನಾನು ಅಪೇಕ್ಷಪಡುತ್ತೇನೆ. ಮತ್ತೊಮ್ಮೆ ನಾನು ಅವರಿಗೆ ಶುಭಾಶಯಗಳನ್ನು ಕೋರುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು(ಬಸವಕಲ್ಯಾಣ) : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಶ್ರೀ ಎಂ.ಸ್. ಪಾಟೀಲ್‌ರವರು ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿರುವುದು ನನಗೆ ಬಹಳ ಸಂತೋಷವಾಗಿದೆ. ಅವರ ಬಗ್ಗೆ ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಶ್ರೀ ಎಂ.ಎಸ್. ಪಾಟೀಲರು ಒಬ್ಬ ಕೃಷಿಕ ಕಾರ್ಮಿಕ ಮುಖಂಡರಾಗಿ ಒಂದು ಕುಟುಂಬದಿಂದ ಬಂದವರು. ಹಿಂದುಳಿದ ಹೈದ್ರಾಬಾದ್ ಕರ್ನಾಟಕ ಭಾಗದ ರಾಯಚೂರು ಜಿಲ್ಲೆಯಿಂದ ಬಂದವರು. ನಮ್ಮ ಪಕ್ಷದ ಹಲವಾರು ಸಂಘಟನೆಗಳಲ್ಲಿ ಭಾಗವಹಿಸಿದಂತಹವರು. ಅವರು ಹಲವಾರು ಸಂಘಸಂಸ್ಥೆಗಳನ್ನು ಕಟ್ಟಿದಂತಹವರು. ಶ್ರೀಮಾನ್ ಎಂ.ಎಸ್. ಪಾಟೀಲರು ಒಳ್ಳೆಯ ವಕೀಲಿ ವೃತ್ತಿಯನ್ನು ಮಾಡಿದಂತಹವರು. ಅವರು ಇಡೀ ರಾಯಚೂರು ಜಿಲ್ಲೆಗೆ ಪ್ರಸಿದ್ಧಿಯಾಗಿದ್ದಾರೆ. ಅವರು ಸತತವಾಗಿ ಮೂರು ಭಾರಿ ಆಯ್ಕೆಯಾಗಿ ಬಂದು ಇವತ್ತು ಉಪಾಧ್ಯಕ್ಷರ ಸ್ಥಾನವನ್ನು ಅಲಂಕರಿಸಿದ್ದಕ್ಕಾಗಿ ನಾನು ನನ್ನ ಪರವಾಗಿ ಮತ್ತು ಹೈದ್ರಾಬಾದ್ ಕರ್ನಾಟಕ ಭಾಗದ ಜನರ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅವರ ಅಧಿಕಾರಾವಧಿಯಲ್ಲಿ ನಮ್ಮ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಜೊತೆಗೆ ಇಡೀ ಕನ್ನಡ ನಾಡಿನ ಎಲ್ಲಾ ಜನರಸಮಸ್ಯೆಗಳಿಗೂ ಸ್ಪಂದಿಸಿಕೊಂಡು ಹೋಗುತ್ತಾರೆ. ಎಲ್ಲಾ ಪಕ್ಷಗಳ ಜೊತೆಗೂ ವಿಶ್ವಾಸವನ್ನು ಗಳಿಸಿ ಜೊತೆಗೆ ತೆಗೆದುಕೊಂಡು ಹೋಗುತ್ತಾರೆ ಎನ್ನುವ ವಿಶ್ವಾಸವನ್ನು ಇಡುತ್ತೇನೆ.

ಅವರು ಚಾಣಕ್ಯರು ಚತುರರು. ಒಳ್ಳೆಯ ಜ್ಞಾನಿಗಳು ಕೂಡ ಆಗಿದ್ದಾರೆ. ಅಂತಹ ಒಬ್ಬ ಮಹಾನ್ ವ್ಯಕ್ತಿಗಳು ಇವತ್ತು ಇಂತಹ ಉನ್ನತ ಸ್ಥಾನಕ್ಕೆ ಆಯ್ಕೆಯಾಗಿರುವುದು ನಮಗೆಲ್ಲರಿಗೂ ಸಂತೋಷವನ್ನುಂಟು ಮಾಡುವ ಸಂಗತಿ. ಅವರ ಅವಧಿಯಲ್ಲಿ ಇಡೀ ವಿಧಾನ ಸಭೆಯ ಕಾರ್ಯಕಲಾಪಗಳನ್ನು ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ತೆಗೆದುಕೊಂಡು ಹೋಗುತ್ತಾರೆನ್ನುವ ಭರವಸೆ ನನಗೆ ಇದೆ. ಅವರು ಬುದ್ಧಿವಂತರು ಎನ್ನುವ ಒಂದು ಮಾತನ್ನು ಹೇಳಿ ಮತ್ತೊಮ್ಮೆ ನಾನು ಅಭಿನಂದಿಸಿ ಈಗಾಗಲೇ ಶ್ರೀಮಾನ್ ಹಸ್ಮಿಯವರು ಕೂಡ ಹೇಳಿದ್ದಾರೆ ಅವರು ಕನ್ನಡದಲ್ಲಿ ಮಾತನಾಡುವುದಕ್ಕೆ ಬರುವುದಿಲ್ಲ ಅಥವಾ ಇಂಗ್ಲೀಷಿನಲ್ಲಿ ಮಾತನಾಡುವುದಕ್ಕೆ ಕೂಡ ಬರುವುದಿಲ್ಲ. ದಯಮಾಡಿ ಹೊಸದಾಗಿ ಆಯ್ಕೆಯಾಗಿ ಬಂದಿರುವಂತಹ ಯುವಕರಿಗೆ ಹೆಚ್ಚು ಆದ್ಯತೆ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ|| ಜೀವರಾಜ ಆಳ್ವ : ಮಾನ್ಯ ಅಧ್ಯಕ್ಷರೇ, ನಾನು ಕೇಳಲೇ ಇಲ್ಲ.

ಅಧ್ಯಕ್ಷರು : ಹೌದು ಹೌದು ತಾವು ಮಾತನಾಡಬೇಕೆನ್ನುವ ಪ್ರೀತಿ ನಮಗೆ

ಡಾ||ಜೀವರಾಜ ಆಳ್ವ : 10ನೇ ವಿಧಾನ ಸಭೆಯಲ್ಲಿ ಬಹು ಮುಖ್ಯ ಪಾತ್ರ ವಹಿಸುವಂತಹ ತಮಗೆ ಸನ್ಯಾನ್ಯ ಮಿತ್ರರಾದ ಎಂ.ಎಸ್. ಪಾಟೀಲರಿಗೆ ಅಭಿನಂದನೆಗಳು.

ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್) : ಮಾನ್ಯ ಅಧ್ಯಕ್ಷರೇ, ಶ್ರೀ ಎಂ.ಎಸ್. ಪಾಟೀಲರು ಕಾನೂನು ಪದವೀಧರರಾಗಿದ್ದು ಅವರೂ ಕೂಡ ತಮ್ಮಂತೆ ಯುವಕರು ಆಗಿದ್ದು ಒಂದು ಉನ್ನತ ಸ್ಥಾನವನ್ನು ಅಲಂಕರಿಸಿದ್ದಕ್ಕಾಗಿ ಅವರಿಗೆ ನನ್ನ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಶ್ರೀ ಎಂ.ಎಸ್. ಪಾಟೀಲರು ಕೂಡ ಕಳೆದ ಭಾರಿ ನಮ್ಮ ಜೊತೆಗೆ ಸಬಾರ್ಡಿನೇಟ್ ಲೆಜಿಸ್‌ಲೇಷನ್ ಕಮಿಟಿಯಲ್ಲಿದ್ದು ಬಹಳ ಉತ್ತಮವಾದ ಕೆಲಸವನ್ನು ಮಾಡಿ ಪರಿಣಾಮಕಾರಿಯಾದ ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಾ ಇರತಕ್ಕಂಥಾದ್ದನ್ನು ಕೂಡ ನನಗೆ ಗೊತ್ತಿದೆ. ಅವರು ಈ ಒಂದು ಸದನದಲ್ಲಿ ಯುವಕರಿಗೆ ಒಂದು ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟು ಸದನದ ಕಾರ್ಯಕಲಾಪಗಳು ಈ ನಾಡಿನ ಜನತೆಗೆ ಉಪಯುಕ್ತವಾಗುವಂತೆ ಕೆಲಸ ಮಾಡುವ ಶಕ್ತಿ ದೊರೆಯಲಿ ಅಂತ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಶರಣಪ್ಪ ಮುದಕಪ್ಪ (ಕುಷ್ಟಗಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಎಂ.ಎಸ್. ಪಾಟೀಲರು ಉಪಾಧ್ಯಕ್ಷರಾಗಿ ಚುನಾಯಿತರಾಗಿದ್ದು ಅವರಿಗೆ ನನ್ನ ಹೃತ್ಪೂರ್ವಕ ವಂದನೆಗಳು. ವಿಶೇಷವಾಗಿ ಎಲ್ಲರಿಗಿಂತ ಹೆಚ್ಚಿನ ಸಂತೋಷ ನನಗೆ ಆಗಿದೆ. ಶ್ರೀ ಎಂ.ಎಸ್. ಪಾಟೀಲರು ಪ್ರಪ್ರಥಮ ಬಾರಿಗೆ ಈ ಸದನ ಪ್ರವೇಶ ಮಾಡಲು ಕುಷ್ಟಗಿ ಕ್ಷೇತ್ರವೇ ಕಾರಣ. ನನ್ನ ಕ್ಷೇತ್ರದಿಂದ ಬಂದಂತಹ ಎಂ.ಎಸ್. ಪಾಟೀಲರು

ಉಪಾಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿದ್ದುದು ನನಗೆ ವೈಯುಕ್ತಿಕವಾಗಿ ಸಂತೋಷ. ಜನತೆಯ ಪರವಾಗಿ ಅವರಿಗೆ ಅಭಿನಂದನೆಗಳು ಇದರ ಜೊತೆಗೆ ಎಂ.ಎಸ್. ಪಾಟೀಲರನ್ನು ನಾನು ವೈಯುಕ್ತಿಕವಾಗಿ ಬಲ್ಲೆ. ಅವರು ವೃತ್ತಿಯಲ್ಲಿ ವಕೀಲರಾಗಿದ್ದರು. ಅವರು ಬಹಳ ಮಿತ ಭಾಷಿಗಳು. A right person is placed on a right place. ಎನ್ನುವಂತೆ ತೀರ್ಪು ಕೊಡುವವರು ಮಿತಭಾಷಿಗಳೇ ಆಗಿರಬೇಕು. ಹಾಗು ಇದನ್ನು ನಾನು ಅವರಲ್ಲಿ ಕಂಡುಕೊಂಡಿದ್ದೇನೆ. ನಿಜವಾಗಿಯೂ ಅವರಿಗೆ ಯೋಗ್ಯ ಸ್ಥಾನ ಸಿಕ್ಕಿದೆ. ಅವರ ಅವಧಿ ನಮಗೆಲ್ಲಾ ಒಂದು ಮಾದರಿಯಾಗಿ ಯಶಸ್ವಿ ಆಗಲಿ ಅಂತ ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೇ, ಮಾನ್ಯ ಎಂ.ಎಸ್. ಪಾಟೀಲರು ಸರ್ವಾನುಮತದಿಂದ ಉಪಾಧ್ಯಕ್ಷರ ಸ್ಥಾನವನ್ನು ಅಲಂಕರಿಸಿದಂತಹ ಸಂದರ್ಭದಲ್ಲಿ ನನ್ನ ಅನಂತ ವಂದನೆಗಳು. ನಾವು ಮಾತನಾಡುವಂತಹ ಸಂದರ್ಭದಲ್ಲಿ ತಮ್ಮ ಪೀಠದ ಬಗ್ಗೆ ತಾವು ಆಯ್ಕೆಯಾದಂತಹ ಸಂದರ್ಭದಲ್ಲಿ ಯುವಕರೇ ಆಯ್ಕೆಯಾಗಿದ್ದಾರೆ ಎನ್ನುವಂತಹ ಮಾತು ಹೆಚ್ಚು ಕಂಡು ಬಂತು. ನನಗನ್ನಿಸುತ್ತದೆ. ಆಡಳಿತ ಪಕ್ಷದ ನಾಯಕರುಗಳನ್ನು, ಪಕ್ಷದವರು ಈ ಸ್ಥಾನಕ್ಕೆ ಸರಿಯಾದಂತಹ ಯಾರಾದರೂ ಒಬ್ಬರು ಹಿರಿಯರು ಉಪಾಧ್ಯಕ್ಷರಾಗಿ ಇರಬೇಕೆನ್ನುವ ದೃಷ್ಟಿಯಿಂದ ನಿಮ್ಮನ್ನು ಆಯ್ಕೆ ಮಾಡಿದ್ದಾರೆ. ಇದರಿಂದ ನಮಗೆ ಭಾರೀ ಸಂತೋಷ ಆಗಿದೆ. ನನ್ನ ಭಾವನೆ ಇಷ್ಟು. ಈಗಾಗಲೇ ಅನೇಕ ಸದಸ್ಯರು ಇದನ್ನು ವ್ಯಕ್ತಪಡಿಸಿದ್ದಾರೆ.

ಈ ಸಭೆ ಯಾವ ರೀತಿಯಾಗಿ ಸೃಷ್ಟಿಯಾಗಿದೆ ಅಂದರೆ, ಆಡಳಿತಪಕ್ಷದಲ್ಲಿ 115 ಜನರು, ವಿರೋಧ ಪಕ್ಷದಲ್ಲಿ 108 ಜನರು ಇರುವಂಥ ಸಂದರ್ಭ. ಈಗಾಗಲೇ ಅಧ್ಯಕ್ಷ ಪೀಠದಲ್ಲಿ ತಾವು ಕುಳಿತಿದ್ದೀರಿ. ಅವರಿಗೆ ಮೆಜಾರಿಟಿ ಬರಬೇಕಾದರೆ ಕನಿಷ್ಟವಾಗಿ 113 ಜನರ ಸಂಖ್ಯೆ ಇರಬೇಕಾಗಿತ್ತು. ಈಗ ಎಂ.ಎಸ್. ಪಾಟೀಲರನ್ನು ಕಳೆದುಕೊಂಡರೆ 113ಜನ ಮಾತ್ರ ಉಳಿದುಕೊಳ್ಳುತ್ತಾರೆ. ಆ ಒಂದು ಬಹುಮತದ ದೃಷ್ಟಿಯಿಂದಲಾದರೂ ಕೂಡ ಈ ಕಡೆಯಲ್ಲಿರತಕ್ಕಂಥವರಿಗೆ ಒಬ್ಬರಿಗೆ ಯಾರಿಗಾದರೂ ಕೊಡತಕ್ಕಂಥ ಕೆಲಸವನ್ನು

ಮಾಡಿದ್ದರೆ, ಅಂಥ ಒಂದು ಸೌಜನ್ಯವನ್ನು ನಮ್ಮ ಸಭಾನಾಯಕರು ತೋರಿಸಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು ಎಂದು ನನ್ನ ಭಾವನೆ. ಏಕೆಂದರೆ ಈ ಮನೆಯಲ್ಲಿ ವಿರೋಧ ಪಕ್ಷದವರಾಗಿ ಒಂದು ಪಕ್ಷದವರು ಇದ್ದಾಗ ಇನ್ನಿತರರಿಗೆ, ಕೊನೆಯ ಪಕ್ಷ ಪಕ್ಷೇತರರಿಗಾದರೂ ಈ ಹುದ್ದೆಯನ್ನು ಕೊಡತಕ್ಕಂಥ ಒಂದು ಕೆಲಸವನ್ನು ಇವರು ಮಾಡಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನ್ನ ಭಾವನೆ. ಅದೇನೇ ಇದ್ದರೂ ಮಾನ್ಯ ಪಾಟೀಲ್‌ರವರು ಮಂತ್ರಿಗಳಾಗಬೇಕಾಗಿತ್ತು. ಅವರು ಈ ಸ್ಥಾನಕ್ಕೆ ಆಯ್ಕೆ ಮಾಡಿದ್ದಾರೆ ಎಂದರೆ ತಪ್ಪಾಗಲಾರದು. ನಾನು ಎಂ.ಎಸ್. ಪಾಟೀಲ್‌ರವರ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. 9ನೇ ವಿಧಾನಸಭೆಯಲ್ಲಿ ನಾವು ಅವರ ಜೊತೆಯಲ್ಲಿದ್ದಂಥ ಸಂದರ್ಭದಲ್ಲಿ ಹಾಗೂ ಸದನದ ಅನೇಕ ಸಮಿತಿಗಳಲ್ಲಿ ಜೊತೆಯಲ್ಲಿ ಕೆಲಸ ಮಾಡಿದ್ದಂಥ ಅವರ ವಿಚಾರ ಹಾಗೂ ಅವರ ಮನೋಭಾವವನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ನನಗನ್ನಿಸುವಂತೆ, ಅಧ್ಯಕ್ಷರನ್ನು ಬಿಟ್ಟರೆ ಉಪಾಧ್ಯಕ್ಷರ ಸ್ಥಾನಕ್ಕೆ ಹೆಚ್ಚಿನ ಮಹತ್ವ ಇದೆ. ಅದೇ ರೀತಿಯಲ್ಲಿ ಹೆಚ್ಚಿನ ಘನತೆ ಗೌರವ ಕೂಡ ಇದೆ. ಸದನ ನಡೆಯಬೇಕಾದಾಗ, ಇಲ್ಲಿನ ಸತ್ಸಂಪ್ರದಾಯವನ್ನು ಪಾಲಿಸಿಕೊಂಡು ಬರುವಾಗ, ಈ ಸದನದ ಗೌರವವನ್ನು ಘನತೆಯನ್ನು ಎತ್ತತಕ್ಕಂಥ ಎಲ್ಲಾ ಗುಣಗಳಿರತಕ್ಕಂಥ ವ್ಯಕ್ತಿಯನ್ನು ಆಯ್ಕೆ ಮಾಡಬೇಕಾಗುತ್ತದೆ. ಅಂಥ ಯೋಗ್ಯ ಅಭ್ಯರ್ಥಿಯಾಗಿ ಮಾನ್ಯ ಪಾಟೀಲರು ಆಯ್ಕೆ ಆಗಿದ್ದಾರೆ. ಎಂದು ನಾನು ಹೇಳಬಯಸುತ್ತೇನೆ.

ನಾವು ನಮ್ಮ ಪಕ್ಷದಿಂದ ಮತ್ತು ಎಲ್ಲಾ ಕಡೆಯಿಂದಲೂ ಕೂಡ ಹೆಚ್ಚಿನ ರೀತಿಯ ಸಹಕಾರರನ್ನು ಕೊಡುತ್ತೇವೆ. ಹಾಗೂ ಮಾನ್ಯ ಪಾಟೀಲರು ಕೂಡ ತಮ್ಮ ಪೀಠವನ್ನು ಅಲಂಕರಿಸಿದಂಥ ಸಂದರ್ಭದಲ್ಲಿ ನಮ್ಮ ಕಡೆಗೆ ಹೆಚ್ಚು ನೋಡಬೇಕೆಂದು ಅಪೇಕ್ಷೆ ಪಡುತ್ತೇನೆ. ಏಕೆಂದರೆ ಒಳ್ಳೆಯ ತೀರ್ಪುಗಳು ತೀರ್ಮಾನಗಳು ಬರಬೇಕಾದರೆ, ತಾವುಗಲು ನಮ್ಮ ಕಡೆ ಹೆಚ್ಚು ನೋಡಬೇಕೆಂಬ ಒಂದು ಒಳ್ಳೆಯ ಮಾತನ್ನು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI B.I. PATIL : Hon'ble Speaker Sir, on behalf of MES, I heartily congratulate Sri M.S. Patil, who has been unanimously elected as the Deputy Speaker of this August House. We hope and trust that he would uphold the rights and privileges of the minorities. We wish him all success in his new assignment. Thank you.

ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಾಧ್ಯಕ್ಷರಾಗಿ ಮಾನ್ಯ ಶ್ರೀ ಎಂ.ಎಸ್. ಪಾಟೀಲ್‌ರವರು ಆಯ್ಕೆಯಾದಂಥ ಸಂದರ್ಭದಲ್ಲಿ ನಾನು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕಳೆದ ವಿಧಾನಸಭೆಯ ಅವಧಿಯಲ್ಲಿ ನನ್ನ ಮುಂದಿನ ಕುರ್ಚಿಯಲ್ಲಿಯೇ ಅವರು ಆಸೀನರಾಗಿರುತ್ತಿದ್ದರು. ನಾವು ಹಿಂದೆ ಕುಳಿತುಕೊಂಡು ಗಲಾಟೆ ಮಾಡುತ್ತಿದ್ದರೂ ಕೂಡ ಕಿರುಚಿಕೊಳ್ಳುತ್ತಿದ್ದರೂ ಕೂಡ ಅವರು ಏನೂ ಹೇಳದೆ ನಮ್ಮನ್ನು ಬಹಳ ಚೆನ್ನಾಗಿ ನೋಡಿಕೊಂಡಿದ್ದಾರೆ. ಈಗ ನಾವೆಲ್ಲರೂ ಪಕ್ಷೇತರರಾಗಿ ಬಹಳ ಕಷ್ಟಪಟ್ಟು ಆರಿಸಿಬಂದಿರತಕ್ಕಂಥವರು. ಬೇರೆಯವರ ಹಾಗೆ ಬಾವುಟದ ಮೇಲೆ ಚಿಹ್ನೆಯ ಮೇಲೆ ನಾವು ಬಂದಿಲ್ಲ. ಆದ್ದರಿಂದ ನಮ್ಮನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ಮಾನ್ಯ ಉಪಾಧ್ಯಕ್ಷರಲ್ಲಿ ಕೇಳಿಕೊಳ್ಳುತ್ತೇನೆ. ಕಳೆದ ನಾಲ್ಕಾರು ದಿನಗಳ ಹಿಂದೆ ಪತ್ರಿಕೆಗಳಲ್ಲಿ ಲೋಕಸಭೆಯಲ್ಲಿ ಬಿಜೆಪಿಯವರಿಗೆ ಯಾವರೀತಿಯಲ್ಲಿ ಉಪಾಧ್ಯಕ್ಷಸ್ಥಾನವನ್ನು ಬಿಟ್ಟುಕೊಟ್ಟಿದ್ದಾರೋ ಅದೇ ರೀತಿಯಲ್ಲಿ ಇಲ್ಲಿ ಜನತಾದಳದವರು ಪಕ್ಷೇತರ ಸದಸ್ಯರಾದ ಮಾನ್ಯ ಶ್ರೀ ಶಿವನಂಜಪ್ಪನವರಿಗೆ ಈ ಸ್ಥಾನವನ್ನು ಕೊಡುತ್ತಾರೆ ಎಂದು ಹೇಳಿದಾಗ ನಾವೆಲ್ಲರೂ

ಬಹಳ ಸಂತೋಷ ಪಟ್ಟಿದ್ದೆವು. ಹೀಗೆ ವಿರೋಧ ಪಕ್ಷದವರಿಗೆ ಕೊಡತಕ್ಕಂಥ ಬಹಳ ದೊಡ್ಡ ಮನಸ್ಸನ್ನು ಮಾಡಿದ್ದಾರಲ್ಲಾ ಎಂದು ಸಂತೋಷಪಟ್ಟಿದ್ದೆ. ಆದರೆ ಅವರನ್ನು ಬಿಟ್ಟು ಎಂ.ಎಸ್. ಪಾಟೀಲ್‌ರವರು ಉಪಾಧ್ಯಕ್ಷರನ್ನಾಗಿ ಮಾಡಿದ್ದಾರೆ. ಪಾಟೀಲ್‌ರವರು ಕೂಡ ನಮ್ಮವರೇ ಆಗಿರುವುದರಿಂದ ಅವರು ಕೂಡ ನಮ್ಮನ್ನು ಹೆಚ್ಚಿನ ಪ್ರೀತಿಯಿಂದ ನೋಡಿಕೊಳ್ಳಬೇಕು. ಈ ಸದನವನ್ನು ಬಹಳ ಚೆನ್ನಾಗಿ ನಡೆಸಿಕೊಂಡು ಹೋಗಬೇಕೆಂದು ಹೇಳಿ ಭವಿಷ್ಯದಲ್ಲಿ ಅವರಿಗೆ ಒಳ್ಳೆಯದಾಗಲಿ ಎಂದು ಆಶಿಸುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ (ತಿಕೋಟ) : ಮಾನ್ಯ ಅಧ್ಯಕ್ಷರೇ, ಇವೊತ್ತಿನ 10ನೇ ವಿಧಾನಸಬೆಯಲ್ಲಿ ಹೊಸದಾಗಿ ಆಯ್ಕೆಯಾದಂಥ ನಮಗೆ ಅವಕಾಶವನ್ನು ಕೊಟ್ಟಿದ್ದನ್ನು ನೋಡಿದರೆ ನಮ್ಮನ್ನು ಪ್ರೋತ್ಸಾಹಿಸಿದ್ದಕ್ಕಾಗಿ ತಮ್ಮನ್ನು ಅಭಿನಂದನೆ ಮಾಡುತ್ತೇನೆ. ಮಾನ್ಯ ಎಂ.ಎಸ್. ಪಾಟೀಲ್‌ರವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇದು ನಮಗೆ ಅತಿ ಹೆಚ್ಚಿನ ಸಂತೋಷವನ್ನುಂಟು ಮಾಡಿದೆ. ಹೈದ್ರಾಬಾದ್ ಕರ್ನಾಟಕದ ಜೊತೆಗೆ ನಮ್ಮ ಬಿಜಾಪುರವನ್ನು ಕೂಡ ಸೇರಿಸಿಕೊಂಡು ಮಾತನಾಡತಕ್ಕಂಥ ಒಂದು ಸಂದರ್ಭ ಬಂದಿದೆ. ಆ ಭಾಗವನ್ನು ಪ್ರತಿನಿಧಿಸತಕ್ಕಂತ ನಮ್ಮ ಹಿರಿಯರು ಉಪಾಧ್ಯಕ್ಷರಾದುದನ್ನು ನೋಡಿದರೆ ನಮಗೆ ಅತೀವ ಸಂತೋಷವನ್ನುಂಟು ಮಾಡುತ್ತದೆ. ಇದರ ಜೊತೆಯಲ್ಲಿ ನಾವು ಅವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, 10ನೇ ವಿಧಾನಸಭೆಯಲ್ಲಿ ಹೊಸದಾಗಿ ಚುನಾಯಿತರಾದ ಯುವಕರು ನಾವು ಬಹಳಷ್ಟು ಬಂದಿದ್ದೇವೆ. ಜನತಾದಳದಲ್ಲಿ, ಬಿಜೆಪಿಯಲ್ಲಿ ಕೂಡ ಹೊಸ ಯುವಕರು ಆಯ್ಕೆಯಾಗಿದ್ದೇವೆ. ಆದರೂ ಎಂದು ದುರ್ದೈವದ ಸಂಗತಿಯೆಂದರೆ ಕಾಂಗ್ರೆಸ್‌ನಲ್ಲಿ ಮಾತ್ರ ಹೊಸ ಯುವಕರು ಆಯ್ಕೆಯಾಗಿ ಬಂದಿಲ್ಲ ಎಂದು ನನಗನ್ನಿಸುತ್ತಿದೆ. ಇದಕ್ಕೆ ಕಾರಣವೆಂದರೆ ಬಹುತೇಕ ಕಾಂಗ್ರೆಸ್ ಪಕ್ಷದವರು ಹೊಸಬರಿಗೆ ಅವಕಾಶ ಕೊಡಲಿಕ್ಕಿಲ್ಲ ಎಂಬ ಅನಿಸಿಕೆ ನನ್ನದು. ಆ ದೃಷ್ಟಿಯಲ್ಲಿ ಇನ್ನು ಮುಂದೆ ಅವರೂ ಕೂಡ ಹೊಸಬರಿಗೆ ಅವಕಾಶ ಕೊಟ್ಟರೆ ಆಯ್ಕೆಯಾಗಿ ಬರುತ್ತಿದ್ದರು ಅಂತ ನನ್ನ ಅನಿಸಿಕೆ. ಈ ಸಂದರ್ಭದಲ್ಲಿ ಎಂ.ಎಸ್.ಪಾಟೀಲರಿಗೆ ಶುಭಕೋರಿ ತಮಗೂ ಕೂಡ ಶುಭಕೋರಿ ನನಗೆ ಅವಕಾಶ ಮಾಡಿ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ.ಹೆಚ್. ಬಸವರಾಜ್ (ಹೊಸದುರ್ಗ) : ಅಧ್ಯಕ್ಷರೇ, ಹೊಸದಾಗಿ ಈ 10ನೇ ವಿಧಾನಸಭೆಗೆ ಉಪಾಧ್ಯಕ್ಷರಾಗಿ ಎಂ.ಎಸ್.ಪಾಟೀಲರು ಆಯ್ಕೆಯಾಗಿರುವುದು ನಮಗೆಲ್ಲಾ ಸಂತೋಷದ ವಿಷಯ. ನಾನೂ ಕೂಡ ಒಬ್ಬ ವಕೀಲನಾಗಿ ಕರ್ನಾಟಕದ ಎಲ್ಲಾ ವಕೀಲವೃಂದ ಪರವಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತಿದ್ದೇನೆ. ಎಂ.ಎಸ್. ಪಾಟೀಲರು ಹೆಚ್ಚಾಗಿ ಹೊಸದಾಗಿ ಚುನಾಯಿತರಾಗಿರುವ ಸದಸ್ಯರಿಗೆ ಬಹಳ ಸಮಯ ಕೊಟ್ಟು ಅವರೂ ಕೂಡ ಹೆಚ್ಚು ಪಾಂಡಿತ್ಯ ಪಡೆದಿರುವ ಹಳೆಯ ಸದಸ್ಯರೊಂದಿಗೆ ಅವರ ಮೌಲ್ಯಗಳನ್ನು ಈ ಸದನದಲ್ಲಿ ಮಂಡಿಸಲಿಕ್ಕೆ ಅವಕಾಸ ಕೊಡುತ್ತಾರೆಂದು ನಂಬಿದ್ದೇನೆ. ಈ ಸಂದರ್ಭದಲ್ಲಿ ಒಬ್ಬ ಲಯನ್ ಸದಸ್ಯನಾಗಿ ನಾನು ನಮ್ಮ ಲಯನ್ಸ್ ಒಕ್ಕೂಟದ ಎಲ್ಲಾ ಸದಸ್ಯರ ಪರವಾಗಿ ಅವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತಿದ್ದೇನೆ.

ಅಧ್ಯಕ್ಷರು : ಸನ್ಮಾನ್ಯ ಸದಸ್ಯರುಗಳೇ, ಮಿತ್ರ ಎಂ.ಎಸ್. ಪಾಟೀಲರನ್ನು ಈ ಸದನ ಸರ್ವಾನುಮತದಿಂದ ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದು ಬಹಳ ಸಂತೋಷದ ವಿಷಯ. ತಮ್ಮೆಲ್ಲರ ಜೊತೆ ಧ್ವನಿಗೂಡಿಸಿ ನಾನೂ ಕೂಡ ಅವರನ್ನು ಅಭಿನಂದಿಸುತ್ತಿದ್ದೇನೆ. ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರು ಹೇಳಿದ ವಿಷಯ ಬಹಳ ಪ್ರಮುಖವಾದುದು. ಸಾರ್ವಜನಿಕ ಜೀವನದಲ್ಲಿ ನಮಗೆ ಸಿಗಬಹುದಾದ ಯಾವುದೇ ಒಂದು ಅವಕಾಶ ಅಧಿಕಾರ ಪ್ರಮುಖವಲ್ಲ ಎಂಬ ಮಾತು ಉದ್ಧವವಾಗುತ್ತದೆ.

ಶಾಸನಸಭೆಯ ಮಟ್ಟಿಗೆ ಹೇಳುವುದಾದರೆ ಈ ಎರಡೂ ಸದನಗಳ ಪಾವಿತ್ರ್ಯತೆ ಬಹಳ ಪ್ರಮುಖವಾದುದು. ಅಡಳಿತದಲ್ಲಿರುವುದು ಬೇರೆ ಈ ಎರಡು ಸ್ಥಾನಗಳ ಪಾವಿತ್ರ್ಯತೆ ಬೇರೆ. ನಾನು ಸಂಪೂರ್ಣವಾಗಿ ಅವರ ಭಾವನೆಗಳನ್ನು ಅನುಮೋದಿಸುತ್ತಾ, ಶ್ರೀ ಎಂ.ಎಸ್. ಪಾಟೀಲರು ಉಪಾಧ್ಯಕ್ಷ ಸ್ಥಾನದಿಂದ ಎರಡು ಮಾತು ಹೇಳಬೇಕೆಂದು ವಿನಂತಿಸುತ್ತಿದ್ದೇನೆ.

ಶ್ರೀ ಎಂ.ಎಸ್. ಪಾಟೀಲ್ (ಉಪಾಧ್ಯಕ್ಷರು) : ಮಾನ್ಯ ಅಧ್ಯಕ್ಷರೇ, ಪ್ರಥಮದಲ್ಲಿ ನಮ್ಮ ನಾಯಕರಿಗೂ ಮತ್ತು ಸದನದ ಎಲ್ಲಾ ನಾಯಕರಿಗೂ ನನ್ನನ್ನು ಇವತ್ತು ಅವಿರೋಧವಾಗಿ ಈ ಸ್ಥಾನಕ್ಕೆ ಚುನಾವಣೆ ಮಾಡಿದ್ದಕ್ಕೆ ಅಭಿನಂದನೆ ಸಲ್ಲಿಸುತ್ತಿದ್ದೇನೆ. ಈ ಸದನ ಬಹಳ ಉನ್ನತವಾದಂಥ ಶ್ರೇಷ್ಠವಾದಂಥ ಪರಂಪರೆ ಪಡೆದುಕೊಂಡು ಬಂದಿದೆ. ಇವತ್ತಿಗೂ ಈ ಸದನದಲ್ಲಿ ಮಾತನಾಡುವಾಗ ತರುಣರು ಬಹಳ ಮಂದಿ ಇದ್ದಾರೆ ಎಂಬ ಭಾವನೆ ವ್ಯಕ್ತಪಡಿಸುತ್ತಿದ್ದರು. ತರುಣರ ಜೊತೆಯಲ್ಲೇ ಅನುಭವಿಗಳೂ ಸಾಕಷ್ಟು ಜನ ಈ ಸದನದಲ್ಲಿ ಪ್ರವೇಶ ಮಾಡಿದ್ದಾರೆ. ಹಿಂದಿನ ಸದನಗಳಲ್ಲಿ ನನಗೆ ಅನುಭವ ಕಡಿಮೆ, ಈ ಸದನದ ಒಂದು ವೈಶಿಷ್ಟ್ಯತೆ ಇಬ್ಬರು ಮಾಜಿ ಮುಖ್ಯಮಂತ್ರಿಗಳನ್ನು ಆಯ್ಕೆಮಾಡಿ ಕಳುಹಿಸಿದೆ. ಇಬ್ಬರು ಮಾಜಿ ಅಧ್ಯಕ್ಷ ಸ್ಥಾನ ಅಲಂಕಾರ ಮಾಡಿದ ಸದಸ್ಯರು ಈ ಸದನದಲ್ಲಿ ಪ್ರವೇಶ ಮಾಡಿದ್ದಾರೆ. ಇವರ ಅಳವಾದ ಅನುಭವ ಮತ್ತು ಹೊಸ ಜನರ ಸ್ಫೂರ್ತಿ ಈ 10ನೇ ವಿಧಾನಸಭೆಗೆ ಹೆಚ್ಚಿನ ಮಹತ್ವ ಕೊಡಲಿ ಎಂದು ಹೇಳುತ್ತಾ ನನಗೆ ಅಭಿನಂದನೆ ಸಲ್ಲಿಸುವ ಸಂದರ್ಭದಲ್ಲಿ ಕೆಲವು ಹಿರಿಯರು ನನಗೆ ಆಶೀರ್ವಾದ ಮಾಡಿದ್ದಾರೆ.

11.45 ಎ.ಎಂ.

ಅಭಿನಂದನೆ ಸಲ್ಲಿಸಿದ್ದಾರೆ. ಮಾನ್ಯ ನಂಜೇಗೌಡರು ಒಂದು ವಿಷಯವನ್ನು ಬಹಳ ಪ್ರಾಮುಖ್ಯವಾಗಿ ಪ್ರಸ್ತಾಪ ಮಾಡಿದರು. ಇವತ್ತಿನ ಪರಿಸ್ಥಿತಿಯನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳಬೇಕಾದದ್ದು ಅತ್ಯಂತ ಮಹತ್ವವಾದುದು. ಈ ಸದನದಲ್ಲಿರತಕ್ಕಂತಹ ಈ ಸ್ಥಾನದ ಗೌರವದ ಬಗ್ಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟು ಪ್ರಸ್ತಾಪ ಮಾಡಿದ್ದಾರೆ ಇದನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಾದುದು ಅವಶ್ಯಕವಾಗಿದೆ. ಹಿರಿಯರಾದಂತಹ ಉಪ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲರು, ಶ್ರೀ ಯಡಿಯೂರಪ್ಪನವರು ಹಾಗೂ ಶ್ರೀಯುತರುಗಳಾದ ಖಿರ್ಗಿಯವರು, ಬಂಗಾರಪ್ಪನವರು, ವಾಟಾಳ್ ನಾಗರಾಜ್ ಅವರು ಶಿವರಾಮರೆಡ್ಡಿಯವರು, ಮುನಿಯಪ್ಪನವರು, ಶಿವನಂಜಪ್ಪನವರು ಯಾವಗಲ್‌ರವರು ಮಾನ್ಯ ನಂಜೇಗೌಡರು, ಬಸವರಾಜ ಪಾಟೀಲ್ ಅಟ್ಟೂರ್ ಅವರು ಜೀವರಾಜ್‌ಆಳ್ವ, ಮಂಜುನಾಥ ಕುನ್ನೂರ್, ಶರಣಪ್ಪ, ಜಯಕುಮಾರ್, ಶಿವಾನಂದ ಪಾಟೀಲ್, ಜಯಚಂದ್ರ, ಬಸವರಾಜ್ ಅವರೆಲ್ಲರೂ ಬಹಳ ಅಭಿಮಾನದಿಂದ ನನಗೆ ಹಾರೈಸಿದ್ದಾರೆ. ಶ್ರೀ ಹಶ್ಮಿಯವರು ನಮ್ಮ ಭಾಗದ ಏಳಿಗೆಗಾಗಿ ಬಹಳ ಚಿಂತನೆ ಮಾಡಿದ್ದಾರೆ. ಅವರು ಹೊಸದಾಗಿ ಬಂದಿದ್ದರೂ ಕೂಡ ಪ್ರಾಮುಖ್ಯವಾಗಿ ಹೈದರಾಬಾದ್ ಕರ್ನಾಟಕದ ಏಳಿಗೆಯ ಬಗ್ಗೆ ಚಿಂತನೆ ಮಾಡತಕ್ಕಂತಹ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕಾಗಿ ನಾನು ಅಭಿನಂದನೆ ಸಲ್ಲಿಸುತ್ತಿದ್ದೇನೆ. ನಾವು ಇಲ್ಲಿ ಕೆಲಸ ಮಾಡತಕ್ಕಂತಹ ಸಂದರ್ಭದೊಳಗೆ ಸದನದ ಸರ್ವ ಸದಸ್ಯರ ಸಹಕಾರ ಬಹಳ ಮುಖ್ಯವಾದುದು. ನಿಮ್ಮ ಸಹಕಾರ ಸಿಗದಿದ್ದರೆ ಸದನವನ್ನು ಸರಿಯಾಗಿ ನಡೆಸಲಿಕ್ಕಾಗುವುದಿಲ್ಲ. ಈ ಸದನವನ್ನು ಸರಿಯಾಗಿ ನಡೆಸಿಕೊಂಡು ಹೋಗಬೇಕಾದರೆ ಸರ್ವ ಸದಸ್ಯರ ಸಹಕಾರ ಬಹಳ ಮುಖ್ಯವಾದದ್ದು. ಎಲ್ಲ ಸದಸ್ಯರ ಸಹಕಾರವನ್ನು ಕೊಡಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಕಿರಿಯ ಸದಸ್ಯರು ನನಗೆ ಮಾರ್ಗದರ್ಶನ ಮಾಡಿಕೊಡಬೇಕು ಆ ರೀತಿ ನೀಡಿದರೆ, ನಾನು ನನಗೆ ಕೆಲವೊಂತಹ ಅವಕಾಶವನ್ನು

ಸರಿಯಾಗಿ ನಡೆಸಿಕೊಂಡು ಹೋಗಲು ಅವಕಾಶ ಸಿಗುತ್ತದೆ. ತಾವೆಲ್ಲರೂ ನನಗೆ ಮಾರ್ಗದರ್ಶನ ಮಾಡಬೇಕೆಂದು ಹೇಳಿ ಈ ಸ್ಥಾನ ಸಿಗಲಿಕ್ಕೆ ಕಾರಣರಾದ ನಮ್ಮ ನಾಯಕರಿಗೆ ಮತ್ತು ತಮ್ಮೆಲ್ಲರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಗಮನ ಸೆಳೆಯುವ ಸೂಚನೆ

1. ಮಂಡ್ಯ ನ್ಯಾಷನಲ್ ಪೇಪರ್ ಮಿಲ್ ಮುಚ್ಚಿರುವ ಬಗ್ಗೆ

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ಕಳೆದ ಎರಡೂವರೆ ವರ್ಷಗಳಿಂದ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ ಮುಚ್ಚಲ್ಪಟ್ಟಿದೆ ಆ ವಿಚಾರದ ಬಗ್ಗೆ ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ಶ್ರೀಮತಿ ವಿಜಯಲಕ್ಷ್ಮಿ ಬಂಡಿ ಸಿದ್ದೇಗೌಡರವರು ನಮ್ಮ ಗಮನ ಸೆಳೆಯುವ ಸೂಚನೆ ತಂದಿದ್ದಾರೆ ಅದರ ಬಗ್ಗೆ ಈ ಕೆಳಕಂಡ ಹೇಳಿಕೆ ಕೊಡಲಿಕ್ಕೆ ಇಷ್ಟಪಡುತ್ತೇನೆ.

ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ ಭಾರತ ಸರ್ಕಾರದ ಕೈಗಾರಿಕಾ ಸಚಿವಾಲಯದ ನಿಯಂತ್ರಣದಲ್ಲಿರುವ ಹಿಂದೂಸ್ತಾನ್ ಪೇಪರ್ ಕಾರ್ಪೊರೇಷನ್ ಲಿಮಿಟೆಡ್‌ನ ಉಪ ಘಟಕ (ಸಬ್ಸಿಡಿಯರಿ) ಆಗಿರುತ್ತದೆ. ಕಾರ್ಖಾನೆಯ ಕಾರ್ಯಾಚರಣೆಯು ದಿನಾಂಕ 1.4.1993 ರಿಂದ ಸ್ಥಗಿತಗೊಂಡಿದೆ. ಈ ಪ್ರಕರಣವು ಬಿ.ಐ.ಎಫ್.ಆರ್. ಮುಂದೆ ಪ್ರಕರಣ ಸಂಖ್ಯೆ : 522:92 ರಲ್ಲಿ ದಿನಾಂಕ 7.7.1992 ರಂದು ನೋಂದಾಯಿಸಲಾಗಿದೆ ಮತ್ತು ಬಿ.ಐ.ಎಫ್.ಆರ್.ರವರು ಸದರಿ ಕಂಪನಿಯನ್ನು ದಿನಾಂಕ 15.12.1992 ರಂದು ಒಂದು ರೋಗಗ್ರಸ್ಥ ಕೈಗಾರಿಕಾ ಉದ್ದಿಮೆ ಎಂದು ಘೋಷಿಸಿರುತ್ತಾರೆ. ಕಾರ್ಖಾನೆಯ ಕಾರ್ಯಸಾಧ್ಯತೆ ಪರಿಶೀಲಿಸಲು ಮತ್ತು ಒಂದು ಪುನಶ್ಚೇತನ ಯೋಜನೆಯನ್ನು ತಯಾರಿಸಲು ಕೆನರಾ ಬ್ಯಾಂಕನ್ನು ಆಪರೇಟಿಂಗ್ ಏಜೆನ್ಸಿ ಎಂದು ನೇಮಿಸಲಾಗಿದೆ. ಈ ಕಾರ್ಖಾನೆಯ ಪುನಶ್ಚೇತನಗೊಳಿಸುವ ಪ್ರಸ್ತಾವನೆ ಬಿ.ಐ.ಎಫ್.ಆರ್. ಮುಂದೆ ಇದೆ. ರಾಜ್ಯ ಸರ್ಕಾರವು ಸದರಿ ಕಾರ್ಖಾನೆಯ ಪುನಶ್ಚೇತನಕ್ಕಾಗಿ ಪರಿಹಾರ ಮತ್ತು ರಿಯಾಯಿತಿಗಳನ್ನು ನೀಡಲು ಒಪ್ಪಿರುತ್ತದೆ.

ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ : ಮಾನ್ಯ ಅಧ್ಯಕ್ಷರೇ, ಇದು ನನ್ನ ಕ್ಷೇತ್ರದ ಜನತೆಯ ಪ್ರಾಣ ರಕ್ಷಣೆಯ ವಿಷಯವಾಗಿದೆ. ಆದ್ದರಿಂದ ದಯಮಾಡಿ ತಾವು ಈ ಫ್ಯಾಕ್ಟರಿ ಪ್ರಾರಂಭ ಮಾಡುವುದಕ್ಕೆ ಸಹಾಯ ಮಾಡಬೇಕು ಮತ್ತು ಈಗಾಗಲೇ ಅಲ್ಲಿ ಹತ್ತು ಸಾವಿರ ಅಂದರೆ ಒಂಭತ್ತು ಸಾವಿರ ಜನರು ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಅವರ ಕುಟುಂಬ, ಅವರ ಹೆಂಡತಿ ಮಕ್ಕಳು ಸೇರಿಸಿದರೆ ಹತ್ತು ಸಾವಿರ ಜನರು ಆಗುತ್ತಾರೆ. ಆದ್ದರಿಂದ ದಯಮಾಡಿ ಈ ಫ್ಯಾಕ್ಟರಿಯನ್ನು ಓಪನ್ ಮಾಡಿ. ಆ ಜನರ ಅನುಕೂಲಕ್ಕಾಗಿ ಉದ್ಯೋಗಕ್ಕಾಗಿ ತಾವು ದಯಮಾಡಿ ಸಹಾಯ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

+ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೇ, ಈ ಒಂದು ಕಾರ್ಖಾನೆಯ ವಿಚಾರದಲ್ಲಿ ತಮ್ಮ ಅಪ್ಪಣೆಯನ್ನು ಪಡೆದು ಇದರ ಚರಿತ್ರೆಯನ್ನು ಸ್ವಲ್ಪ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನನ್ನ ಸುದೈವ. ಇಂದು ಈ ಸದನದಲ್ಲಿ ನಾನು ಮೇಲ್ಮನೆಯಲ್ಲಿ ಈ ವಿಚಾರವನ್ನು ಹಲವಾರು ಬಾರಿ ಪ್ರಸ್ತಾಪ ಮಾಡಿದಾಗ ಕಿಂಚಿತ್ತಾದರೂ ಸಹಾಯಕ್ಕೆ ಬಂಧಂಥ ಈರ್ವರೂ ಮಾಜಿ ಮುಖ್ಯಮಂತ್ರಿಗಳು ನಮ್ಮ ಮುಂದೆ ಇದ್ದಾರೆ. ಮೊದಲಿಗೆ ಶ್ರೀಮಾನ್ ಬಂಗಾರಪ್ಪನವರು ಈ ಕಾರ್ಖಾನೆಗೆ ಕಚ್ಚಾ ಮಾಲು ಏನು ಬೇಕಾಗಿತ್ತೋ ಬೆಗಾಸ್ ಎನ್ನತಕ್ಕಂಥದ್ದು. ಕಚ್ಚಾ ವಸ್ತು ಬೆಗಾಸ್‌ನ್ನು ಉಪಯೋಗಿಸಿಕೊಂಡು ಕಾಗದದ ಕಾರ್ಖಾನೆ ನಡೆಯುತ್ತಿರುವುದು ಇದು ಇಡೀ ಭಾರತದಲ್ಲೇ ಪ್ರಥಮ.